ಸಾಲಿನಲ್ಲಿ ಪರಿಶಿಷ್ಟ ಜಾತಿ/ ಜನಾಂಗದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಕೊಡುವುದಕ್ಕಾಗುವುದಿಲ್ಲ. ಸರ್ಕಾರ ಆ ರೀತಿ ಆದೇಶ ಕೊಟ್ಟಿದೆ ಎಂಬ ಸಂದೇಶ ಇಡೀ ಕರ್ನಾಟಕ ರಾಜ್ಯದ ತುಂಬಾ ಒಂದು ಸಂದೇಶ ಹೋಗಿತ್ತು. ಅದಕ್ಕೋಸ್ಕರ, ಎಲ್ಲಾ ಮಾನ್ಯ ಸದಸ್ಯರ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ ಹಣಕಾಸು ಇಲಾಖೆಯು ಒಪ್ಪಿಗೆ ಕೊಟ್ಟಿದೆ. ಅದಕ್ಕೆ 2006–07ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಸರ್ಕಾರ ಕೊಡುತ್ತಿದೆಯೆಂದು ತಮ್ಮ ಮೂಲಕ ತಿಳಿಸುತ್ತಿದ್ದೇನೆ.

7. ವಿತ್ತೀಯಕಾರ್ಯಕಲಾಪ

(ಅ) 2006–07ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ

ಅಧ್ಯಕ್ಷರು: ಈಗ ಬೇಡಿಕೆಗಳು ಮಂಡನೆಯಾಗಿರುವುದರಿಂದ ಸದಸ್ಯರಾದ ಶ್ರೀ ಶ್ರೀನಿವಾಸಗೌಡರು ಮಾತನಾಡಬೇಕು.

(ಆ) ಇಲಾಖೆಗಳ ನಿರ್ವಹಣಾ ಮುಂಗಡ ಪತ್ರ ಒದಗಿಸದೇ ಇರುವ ಬಗ್ಗೆ

ಶ್ರೀ ಎಸ್.ಎಸ್.ಪಾಟೀಲ್: ಬೇಡಿಕೆಗಳು ಮಂಡನೆಯಾಗಿದ್ದರೂ 2006–07ನೇ ಸಾಲಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ಹೊರತುಪಡಿಸಿ ಬೇರಾವುದೇ ಇಲಾಖೆಯ ನಿರ್ವಹಣಾ ಮುಂಗಡಪತ್ರ ನಮಗೆ ಬಂದಿರುವುದಿಲ್ಲ. ಮತ್ತೇನು ಚರ್ಚೆ ಮಾಡುವುದು? 2005–06ನೇ ಸಾಲಿನ ವಾರ್ಷಿಕ ವರದಿಗಳನ್ನು ಕಳುಹಿಸಿದ್ದಾರೆ. ಏನು ಮಂಡನೆ ಇದು? ಒಂದು ಇಲಾಖೆಯ ನಿರ್ವಹಣಾ ಮುಂಗಡ ಪತ್ರಗಳು ಬಂದಿಲ್ಲ. ವರ್ಷದಲ್ಲಿ ಯಾವ್ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ? ಏನೇನು ಸಾಧಿಸಲಾಗಿದೆ? ದುಡ್ಡು ಎಲ್ಲಿದೆ? ಇದ್ಯಾವುದರ ಬಗ್ಗೆಯೂ ಮಾಹಿತಿ ನೀಡದೆ ಸುಮ್ಮನೆ ಬಜೆಟ್ ಮೇಲೆ ಮಾತನಾಡಿ ಎಂದರೆ, ಇದಕ್ಕೆ ಏನು ಅರ್ಥವಿದೆ? ಯಾವ ಇಲಾಖೆಯದನ್ನೂ ಕೊಟ್ಟಿಲ್ಲ. ಕೇವಲ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಮಾತ್ರ ಇವೊತ್ತು ಬೆಳಗ್ಗೆ ಬಂದಿದೆ. ಶಿಕ್ಷಣ ಇಲಾಖೆ ಹೊರತುಪಡಿಸಿದರೆ, ಯಾವ ಇಲಾಖೆಯ ನಿರ್ವಹಣಾ ಮುಂಗಡ ಪತ್ರಗಳು ಪ್ರಿಂಟ್ ಆಗಿಲ್ಲವೆಂದು ಹೇಳುತ್ತಾರೆ.

ಅಧ್ಯಕ್ಷರು: ಮಾನ್ಯ ಪಾಟೀಲರಿಗೆ ಹೇಳುವುದೇನೆಂದರೆ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನು ಕರೆಸಿ ಈ ತರಹ ನಿರ್ವಹಣಾ ಮುಂಗಡ ಪತ್ರಗಳು ಸಕಾಲಕ್ಕೆ ಸರಿಯಾಗಿ ಬಂದು ಮುಟ್ಟುತ್ತಿಲ್ಲ. ನೀವು ಎಲ್ಲಾ ಇಲಾಖಾ ಕಾರ್ಯದರ್ಶಿಯವರಿಗೆ ಸೂಚನೆ ಕೊಡಬೇಕು. ಮತ್ತು ಸಮಯಕ್ಕೆ ಸರಿಯಾಗಿ ಒದಗಿಸಿಕೊಡಬೇಕೆಂಬ ವಿನಂತಿಯನ್ನು ನಾನು ಹಿಂದೆ ಮೀಟಿಂಗ್ ಕರೆದು ತಿಳಿಸಿದ್ದೇನೆ. ಆದರೆ, ಯಾವುದೂ ಬಂದಿರುವುದಿಲ್ಲ. ಸೆಕ್ರಟೇರಿಯಟ್‌ರವರು ಕಳುಹಿಸಿದ್ದಾರೆ. ನಿವು ಈಗ ಬಂದಿಲ್ಲವೆಂದು ಹೇಳುತ್ತಿರುವುದು ಯಾವುದೆಂದು ನನಗೆ ಗೊತ್ತಿಲ್ಲ. ಅದಕ್ಕೆ ಸರ್ಕಾರದವರು ಅದರ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕು.

ಶ್ರೀ ನೆ.ಲ. ನರೇಂದ್ರಬಾಬು: ಸರ್ಕಾರ ಎಷ್ಟು ನಿಷ್ಕ್ರಿಯವಾಗಿದೆಯೆಂದು ಗೊತ್ತಾಗುತ್ತದೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನಿರ್ವಹಣಾ ಮುಂಗಡ ಪತ್ರ ಕೊಟ್ಟಿಲ್ಲವೆಂದರೆ ನಾವೇನು ಚರ್ಚೆ ಮಾಡಬೇಕು?

ಶ್ರೀ ಸಿ.ಟಿ. ನರೇಂದ್ರಬಾಬು: ಸರ್ಕಾರ ಎಷ್ಟು ನಿಷ್ಠಿಯವಾಗಿದೆಯೆಂದು ಗೊತ್ತಾಗುತ್ತದೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನಿರ್ವಹಣಾ ಮುಂಗಡ ಪತ್ರ ಕೊಟ್ಟಿಲ್ಲವೆಂದರೆ ನಾವೇನು ಚರ್ಚೆ ಮಾಡಬೇಕು?

ಶ್ರೀ ಸಿ.ಟಿ. ನರೇಂದ್ರಬಾಬು: ಯಾವುದರ ಬಗ್ಗೆ ಚರ್ಚೆ ಮಾಡಬೇಕು?

ಡಾ: ಶರಣಪ್ರಕಾಶ್ರುದ್ರಪ್ಪ ಪಾಟೀಲ್: ಸರ್ಕಾರ ಇಷ್ಟು ನಿಷ್ಠಿಯವಾಗಿ ಕೆಲಸ ಮಾಡಿದರೆ ಹೇಗೆ? ನಿರ್ವಹಣಾ ಮುಂಗಡ ಪತ್ರ ಕೊಟ್ಟಿಲ್ಲವೆಂದರೆ, ಸರ್ಕಾರದ ಕಾರ್ಯಕ್ರಮಗಳೇನೆಂಬ ಬಗ್ಗೆ ನಾವು ಹೇಗೆ ಹೇಳುವುದು? ಸುಮ್ಮನೆ ಈ ರೀತಿ ಚರ್ಚೆ ಮಾಡಿ ಎಂದರೆ, ಮಾಡುವುದಕ್ಕಾಗುವುದಿಲ್ಲ. ಸರ್ಕಾರಿ ಬರೀ ವರ್ಗಾವಣೆ ಮಾಡುವುದರಲ್ಲೇ busy ಆಗಿದೆ. ಇದರ ಬಗ್ಗೆ ಸಮ್ಮಿಶ್ರ ಸರ್ಕಾರದ ಪಕ್ಷದವರೇ ಹೇಳುತ್ತಿದ್ದಾರೆ.

ಅಧ್ಯಕ್ಷರು: ಯಾವ್ಯಾವ ಇಲಾಖೆಗಳಿಂದ ಬಂದಿದೆಯೋ ಅವೆಲ್ಲವನ್ನೂ ಕಳುಹಿಸಿದ್ದೇವೆ. ಆದರೆ, ನಿಮಗೆ ಯಾವ್ಯಾವುದು ಬಂದಿದೆಯೆಂಬುದು ನನಗೆ ಗೊತ್ತಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಕೃಷಿ ಇಲಾಖೆಗೆ 2005–06ನೇ ಸಾಲಿಗೆ ಸಂಬಂಧಿಸಿದಂತೆ ಬಂದಿಲ್ಲ.

ಶ್ರೀ ಧರ್ಮಸಿಂಗ್: ಬೇಡಿಕೆಗಳ ಬಗ್ಗೆ ಪುಸ್ತಕ ಬಂದಿದೆ. ಫೈನಾನ್ಸ್‌ಗೆ ಸಂಬಂಧಿಸಿದಂತೆ ರಿಪೋರ್ಟ್ ಬೇಕಾಗುತ್ತದೆ, physical progress ಬಗ್ಗೆ ಬೇಕಾಗುತ್ತದೆ. ಇದು ಮಾನ್ಯ ಯಡಿಯೂರಪ್ಪನವರಿಗೆ ಮತ್ತು ಪ್ರಕಾಶ್‌ರವರಿಗೂ ಗೊತ್ತು. ಯಾವಾಗಲೂ ಕೂಡ ಪ್ರತಿ ಇಲಾಖೆಗಳ ಬೇಡಿಕೆಗಳಿಗೆ ಸಂಬಂಧಿಸಿದ ವಿವರಗಳನ್ನು ಸರ್ಕಾರ ಒದಗಿಸಿಕೊಡಬೇಕಾಗುತ್ತದೆ. ಅದರ ಮೇಲೆ ಚರ್ಚೆಯಾಗುತ್ತಿದೆ, ಅದು ಬಂದಿಲ್ಲವಾದ್ದರಿಂದ ಒದಗಿಸಿಕೊಡಲೇಬೇಕು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಪ್ರಕಾಶ್‌ರವರೆ, ಇದಕ್ಕೆ ದಯವಿಟ್ಟು ಹೇಳಬೇಕು. ಹೇಗೆ ಚರ್ಚೆ ಮಾಡಬೇಕೆಂದು ತಾವೇ ಹೇಳಬೇಕು? ಅವರ ಇಲಾಖೆಯದೂ ಇವೊತ್ತು ಬಂದಿಲ್ಲ. ಅವರದು ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಗೆ ಸಂಬಂಧಿಸಿದಂತೆ ವರದಿ ಬಂದಿರುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಶಾಸಕರು ಎತ್ತಿರುವಂತಹ ಸಮಸ್ಯೆ ಏನಿದೆ, ಆ ಕುರಿತಂತೆ ನಿಜವಾಗಿಯೂ ಅರ್ಥಪೂರ್ಣವಾದ ಚರ್ಚೆಯಾಗಬೇಕಾದರೆ, ನಾವು ಅದರ ಎಲ್ಲಾ ವಿವರಗಳನ್ನು ಪೂರಕ ಅಂದಾಜು ಪಟ್ಟಿ ಎಲ್ಲವನ್ನೂ ಅವರಿಗೆ ಒದಗಿಸಿಕೊಡಬೇಕಾಗುತ್ತದೆ. ಆಯವ್ಯಯದಲ್ಲಿ ಅದರ ಬಗ್ಗೆ ಸ್ಥೂಲವಾಗಿ ಹೇಳಿರುತ್ತೇವೆ. ವಿವರಗಳು ಸಿಗಬೇಕಾಗಿದ್ದರೆ, ಅಲ್ಲಿರುತ್ತದೆ. ಆ ಕಾರಣಕ್ಕಾಗಿ ಇವೊತ್ತು ಏನು ತಪ್ಪಾಗಿದೆ, ಇದಕ್ಕೆ ಸರ್ಕಾರ ಹೊಣೆಗಾರಿಕೆ ಹೊತ್ತುಕೊಳ್ಳುತ್ತದೆ, ಇಲ್ಲವೆಂದು ನಾನು ಹೇಳುವುದಿಲ್ಲ. ತಾವೆಲ್ಲರೂ ಬಯಸುವುದಾಗಿದ್ದರೆ, ಚರ್ಚೆಯನ್ನು ತಮ್ಮ

ಇದುವರೆಗಿನ ಅನುಭವದ ಹಿನ್ನೆಲೆಯಲ್ಲಿ ಮಾಡಬಹುದು. ಇಲ್ಲವೇ ಚರ್ಚೆ ಮಾಡುವುದಕ್ಕೆ ತೊಂದರೆ ಇದೆಯೆಂದು ಸದನ ಅಭಿಪ್ರಾಯಪಡುವುದಾಗಿದ್ದರೆ, ನಾನು ಅಧಿಕಾರಿಗಳಿಗೆ ಹೇಳಿ ಸಂಪೂರ್ಣ ಮಾಹಿತಿಗಳನ್ನು ದಯಮಾಡಿ ಒದಗಿಸಿಕೊಡಬೇಕೆಂದು ಹೇಳಿ ಕಳುಹಿಸುತ್ತೇನೆ.

ಶ್ರೀ ಎ.ಕೃಷ್ಣಪ್ಪ: ಇವೊತ್ತಿನ ಅಜೆಂಡಾದಲ್ಲಿ ಇಲಾಖಾ ಬೇಡಿಕೆಗಳಿಗೆ ಸಂಬಂಧಿಸಿದಂತೆ ಏನು ಪಟ್ಟಿ ಮಾಡಿದ್ದಾರೆ, ಅದಕ್ಕೆ ಸಂಬಂಧಿಸಿದಂತೆ ಕೆಲವು ಸಲಹೆಗಳನ್ನು ಕೊಡಬೇಕಾಗುತ್ತದೆ. For example: Animal Husbandary. ಮೆಡಿಸಿನ್ಸ್‌ಗೆ ಪಾಪ್ಯುಲೇಶನ್ ಅನ್ನು ಗಮನದಲ್ಲಿಟ್ಟುಕೊಂಡು ಕೊಟ್ಟಿರುವಂತಾದ್ದು ಇದೆಯೇ? ಇಲ್ಲವೇ? ಕೊಟ್ಟಿದ್ದರೆ, ಎಷ್ಟು ಕೊಟ್ಟಿದ್ದೀರಿ? ಎಷ್ಟು enhance ಆಗಿದೆ? ಅದರ ಸಾಧಕ ಭಾಧಕಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದ್ದರೆ, ನಾವು mathematic figure, arthemetic figure, finance status ಏನಿದೆ, ಅದು ಸರ್ಕಾರದ ಕಡೆಯಿಂದ ಇಲ್ಲ. ಸುಮ್ಮನೆ general ಆಗಿ ಮಾತನಾಡಬಹುದಷ್ಟೆ. ಅದರ ದುಡ್ಡು ಜಾಸ್ತಿ ಮಾಡಿ, ಬಿಲ್ಡಿಂಗ್‌ಗೆ ಜಾಸ್ತಿ ಮಾಡಿ, veterinery hospitals ಜಾಸ್ತಿ ಮಾಡಿ ಎಂದು ಈ ರೀತಿ ಹೇಳಿಕೊಂಡು ಹೋಗಬೇಕಾಗುತ್ತದೆ. ಆದರೆ, breakdown ಕೊಟ್ಟು ನಿಮ್ಮ ಕಡೆ ಗಮನಸೆಳೆಯುವುದು ಹೇಗೆ? ಇವೊತ್ತು animal husbandary ಬೇಡಿಕೆ ಟೇಬಲ್ ಮಾಡಿದ್ದೀರಿ, ಅದರ ಬಗ್ಗೆ ಈಗ ಮಾತನಾಡಬೇಕೆಂದು ನಮಗೆ ಆಸೆ ಇದೆ. ಏಕೆಂದರೆ, ಬಾಯಿ ಇರುವವರ ಬಗ್ಗೆ ಮಾತನಾಡಲು ಬಾಯಿ ಇರುವ ಜನರಿದ್ದಾರೆ. ಆದರೆ, ಬಾಯಿ ಇಲ್ಲದಿರುವ ಮೂಕಪ್ರಾಣಿಗಳ ಬಗ್ಗೆ ಏನಾದರೂ ನಾಲ್ಕು ಮಾತುಗಳನ್ನು ಹೇಳಿ ನಿಮ್ಮಿಬ್ಬರ ಗಮನ ಸೆಳೆಯಬೇಕೆಂದು ನಮಗೆ ಆಸೆ ಇದೆ. ಆದರೆ, ಅಲೋಕೇಶನ್ ಏನಿದೆ, ಬಿಲ್ಡಿಂಗ್‌ಗೆ ಏನು ಕೊಟ್ಟಿದ್ದೀರಿ? ವೆಟರ್ನರಿ ಆಸ್ಪತ್ರೆಗೆ ಏನು ಕೊಟ್ಟಿದ್ದೀರಿ? ಆಸ್ಪತ್ರೆಗಳನ್ನು ನಡೆಸುವುದಕ್ಕೆ ಇವೊತ್ತು ಎಷ್ಟು ಕೋಟಿ ರೂಪಾಯಿಗಳಷ್ಟು ಬಾಡಿಗೆಯನ್ನು ಸರ್ಕಾರ ಕೊಡುತ್ತಿದೆ? ಹಾಸ್ಟೆಲ್‌ಗಳನ್ನು ನಡೆಸುವುದಕ್ಕೆ ಕೊಡುತ್ತಿದೆ? ಅದನ್ನು ನಾವು ತಪ್ಪಿಸಿ ಹಣವನ್ನು ಸೇವಿಂಗ್ಸ್ ಮಾಡಬೇಕಾದರೆ, ಬಿಲ್ಡಿಂಗ್ ಕನ್‌ಸ್ಟ್ರಕ್ಷನ್‌ಗೆ ನೀವು ಏನು ಯೋಚನೆ ಮಾಡಿದ್ದೀರಿ? ನಿಮ್ಮ ಯೋಜನೆಗಳೇನು ಅಥವಾ ಕೊಟ್ಟಿರುವುದಾದರೂ ಎಷ್ಟು ಎಂದು ಗೊತ್ತಾಗಬೇಕಲ್ಲ. ಹೇಗೆ ಮಾತನಾಡುವುದು?

ಅಧ್ಯಕ್ಷರು: ಮಾನ್ಯ ಕೃಷ್ಣಪ್ಪನವರೆ, ನಮ್ಮ ಪ್ರಕಾರ ಎಜ್ಯುಕೇಶನ್ ಡಿಪಾರ್ಟ್‌ಮೆಂಟ್‌ದ್ದು ನಿರ್ವಹಣಾ ಮುಂಗಡಪತ್ರ ಕಳುಹಿಸಿದ್ದಾರೆ. ಆನಂತರ, ಮೀನುಗಾರಿಕೆ ಇಲಾಖೆಯದ್ದೂ ಕಳುಹಿಸಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್: ಬಂದಿಲ್ಲ. 2005-06ನೇ ಸಾಲಿನ ವರದಿ ಬಂದಿಲ್ಲ. ಬಂದಿದೆಯೆಂದು ಸುಮ್ಮನೆ ಹೇಳಬೇಡಿ. ಶಿಕ್ಷಣ ಇಲಾಖೆಯದು ಒಂದೇ ಬಂದಿರುವುದು. ಇವರು ತಪ್ಪು ಹೇಳುತ್ತಾರೆ. ಅಧ್ಯಕ್ಷರಿಗೆ ಇವರು ತಪ್ಪು ಹೇಳುತ್ತಾರೆ. ಅಧ್ಯಕ್ಷರೇ ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು: ಮಾನ್ಯ ಪಾಟೀಲರೆ, ನಮ್ಮ ಸೆಕ್ರೆಟರಿಯಟ್‌ಗೆ ಬಂದು ಕಾರ್ಮಿಕ ಇಲಾಖೆಯ ನಿರ್ವಹಣಾ ಮುಂಗಡ ಪತ್ರ ಕೊಟ್ಟಿದ್ದಾರೆ. ನಮ್ಮ ಸೆಕ್ರೆಟರಿಯವರು ಯಾವ್ಯಾವ ಇಲಾಖೆಗಳು ಕಳುಹಿಸಿಕೊಟ್ಟಿವೆಯೆಂದು ಹೇಳುತ್ತಿದ್ದಾರೆ. ನಾನು ಈಗ ಓದಿ ಹೇಳುತ್ತಿದ್ದೇನಲ್ಲಾ, ಮೀನುಗಾರಿಕೆ

ಇಲಾಖೆಯದು ಬಂದಿದೆ. ಅದನ್ನು ನಮಗೆ 19ನೇ ತಾರೀಖಿನಂದು ಕಳುಹಿಸಿಕೊಡಲಾಗಿದೆ. ನಿಮಗೆ 24ರಂದು ಅದನ್ನು ಕಳುಹಿಸಿರುವುದರಲ್ಲಿ ಕಾರ್ಮಿಕ ಇಲಾಖೆಯ ನಿರ್ವಹಣಾ ಮುಂಗಡ ಪತ್ರವೂ ಹೋಗಿದೆ. ಇವೊತ್ತು ನಮಗೆ ಶಿಕ್ಷಣ ಇಲಾಖೆಯ ಪೇಪರ್‌ಗಳು ಬಂದಿವೆ, ಜೊತೆಗೆ ನಿರ್ವಹಣಾ ಮುಂಗಡ ಪತ್ರ ಬಂದಿದ್ದು, ಇವೊತ್ತು ಕಳುಹಿಸಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್: ಇಲ್ಲ, ಬಂದಿಲ್ಲ, ನಾವು ಎಲ್ಲವನ್ನೂ ತಂದಿದ್ದೇವೆ.

ಶ್ರೀ ಎಸ್.ಎಸ್.ಪಾಟೀಲ್: ಇಲ್ಲ, ಬಂದಿಲ್ಲ. ಬಂದಿರುವ ಎಲ್ಲವು ಇಲ್ಲೇ ಇದೆ. ಎಲ್ಲವನ್ನು ತಂದಿದ್ದೇವೆ. ಅದಕ್ಕಾಗಿಯೇ ಇವಿಷ್ಟನ್ನು ದಿನಾ ಹೊತ್ತುಕೊಂಡು ಓಡಾಡುತ್ತೇವೆ.

ಶ್ರೀ ಡಿ.ಆರ್.ಪಾಟೀಲ್: ಡಿಮ್ಯಾಂಡ್ಸ್ ಮೇಲೆ ಯಾವಾಗಲೂ ಹೌಸ್‌ನಲ್ಲಿ ಡಿಸ್‌ಕಷನ್ ಸರಿಯಾಗಿ ಆಗುವುದೇ ಇಲ್ಲ. ಮಾಹಿತಿಯನ್ನು ಕೊಡುವುದಿಲ್ಲ. ಸಬ್ಜೆಕ್ಟ್ ಕಮಿಟಿ ಇದ್ದರೆ, ಅಲ್ಲಿ ಬಹಳ ಡೀಪಾಗಿ ಡಿಸ್‌ಕಷನ್ ಮಾಡಿ ಸಲಹೆ ಕೊಡಲು ಸಾಧ್ಯವಾಗುತ್ತಿತ್ತು. ಏನೋ ಅಧಿಕಾರಿಗಳಿಗೆ ಅನುಕೂಲವಾಗಬೇಕೆಂದು ಅದನ್ನು ತೆಗೆದುಬಿಟ್ಟಿರಿ. ದಯವಿಟ್ಟು ಅದನ್ನು ರೀ-ಇಂಟ್ರಡ್ಯೂಸ್ ಮಾಡಿ Next budget ನಿಂದ ಸಬ್ಜೆಕ್ಟ್ ಕಮಿಟಿ ಅಸ್ತಿತ್ವಕ್ಕೆ ಬರುವಂತೆ ತಾವು ಕ್ರಮ ಕೈಗೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್: ಈ ವಿಚಾರದಲ್ಲಿ ಇಲ್ಲೇ ನಮ್ಮ ಶಾಸಕರಲ್ಲೇ ಬಹಳ ಅಭಿಪ್ರಾಯಗಳ ಬೇಧವಿತ್ತು ನಾವು ವಿಷಯ ಸಮಿತಿಯಲ್ಲಿ ಕೂಲಂಕುಷವಾಗಿ ಎಲ್ಲಾ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ನಾವೇನು ಸದನದಲ್ಲಿ ಪ್ರಸ್ತಾಪ ಮಾಡುತ್ತೇವೆ ಆ ಸಂದರ್ಭದಲ್ಲಿ ನಮ್ಮ ಕ್ಷೇತ್ರದಲ್ಲಿರತಕ್ಕದ್ದೋ ಸಾರ್ವಜನಿಕರಿಗೆ ಸರ್ಕಾರದ ನ್ಯೂನತೆಗಳು ಆಗಬಹುದು ಅಥವಾ ಅದು ಮಾಡಿದಂಥ ಒಳ್ಳೆಯ ಕೆಲಸಗಳಾಗಿರಬಹುದು, ನಾವು ಕೊಡುವಂಥ ಸಲಹೆಗಳಾಗಬಹುದು, ಇದು ಯಾವುದೂ ಕೂಡ ಪರಿಚಿತವಾಗುವುದಿಲ್ಲ. ಆ ಕಾರಣಕ್ಕಾಗಿ ವಿಷಯ ಸಮಿತಿಗಳ ಅಗತ್ಯತೆ ಇಲ್ಲ. ಅದು ಸದನದಲ್ಲೇ ಚರ್ಚೆಯಾಗಲಿ ಎನ್ನುವ ಒಂದು ವಾದ ಇತ್ತು. ಆದರೆ ತಾವು ಹೇಳಿದಂತೆ ಬಹಳ ವಿಷಯಗಳು ಅಲ್ಲಿ ಚರ್ಚೆಗೆ ಒಳಪಡುತ್ತವೆ. ಅಧಿಕಾರಿಗಳು ಬರುತ್ತಾರೆ. ಅವರನ್ನು ನಾವು ಅನೇಕ ವಿಷಯಗಳನ್ನು ಪ್ರಶ್ನೆ ಮಾಡಿ ವಿಚಾರಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಅದರಲ್ಲಿ ಒಮ್ಮತ ಬರದಿದ್ದರಿಂದ ಸರ್ಕಾರ ಈ ರೀತಿಯ ವಿಷಯ ಸಮಿತಿಗಳು ಬೇಡ, ಬಜೆಟ್‌ನಲ್ಲಿ ಚರ್ಚೆಯಾಗಲಿ ಎಂದು ನಿರ್ಣಯವನ್ನು ತೆಗೆದುಕೊಂಡಿದೆ. ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಾಗಲಿ ಅಥವಾ ಬೇರೆ ಸಂದರ್ಭದಲ್ಲಾದರೂ ಸದನದ ಎಲ್ಲಾ ಸದಸ್ಯರು ಒಪ್ಪುವುದಾದರೆ ಅದು ನಮ್ಮ ಕೈಯಲ್ಲೇ ಇರುತ್ತದೆ. ನಮ್ಮಲ್ಲೇ ಇರತಕ್ಕ ವಿಚಾರಗಳು. ಅದನ್ನು ಬದಲಿಸುವುದಕ್ಕೆ ಸಾಧ್ಯವಿದೆ. ಆದರೆ ಪದೇ ಪದೇ ಬದಲಿಸತಕ್ಕದ್ದೇನಿದೆ ಅದು ಸರಿಯಾದುದಲ್ಲ. ಏಕೆಂದರೆ ಒಂದು ಸಲ ನಿರ್ಣಯ ತೆಗೆದುಕೊಳ್ಳುವುದು ಮತ್ತೆ ಅದನ್ನು ಬದಲಿಸುವುದು ಮತ್ತೆ ನಿರ್ಣಯ ತೆಗೆದುಕೊಳ್ಳುವುದು ಇದು ಒಳ್ಳೆಯ ಆಡಳಿತದ ಲಕ್ಷಣವಾಗುವುದಿಲ್ಲ. ಅದಕ್ಕಾಗಿ ಅದೇನೇ ಆಗಿರಲಿ, ಈಗೇನು ತಾವು ಪ್ರಸ್ತಾಪ ಮಾಡಿದ್ದೀರಿ.

ಶ್ರೀ ಎಸ್.ಎಸ್.ಪಾಟೀಲ್: ಲೋಕಸಭೆಯಲ್ಲಿ ಅದು ಇದೆ.

ಶ್ರೀ ಎಂ.ಪಿ. ಪ್ರಕಾಶ್: ಎಲ್ಲಾ ಕಡೆ ಇದೆ. ನಾವು ಅದನ್ನು ಮಾಡಿದ್ದೆವು. ಆದರೆ ಅದಕ್ಕೆ ವಿರೋಧ ಬಂದಿದ್ದರಿಂದ..

ಶ್ರೀ ಎಸ್.ಎಸ್.ಪಾಟೀಲ್: ಕನಿಷ್ಟ ನೀವಿಲ್ಲಿ ಚರ್ಚೆ ಮಾಡುತ್ತೀರಾ: ಮಾಡುವ ಮುನ್ನ ಅದಷ್ಟನ್ನು ಚರ್ಚೆಗೆ ಇಡಿ. ನಿರ್ವಾಹಣ ಮುಂಗಡ ಪತ್ರ ಬಾರದಿದ್ದರೆ ಇದು ಚರ್ಚೆಯೇ ಆಗುವುದಿಲ್ಲ. ಯಾವ ಉದ್ದೇಶದಿಂದ ಮಾಡುತ್ತೇವೆ ಅದು ಆಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್:ಆದ್ದರಿಂದ ನಾನು ಅದನ್ನು ಒಪ್ಪಿಕೊಂಡೆ. ನಿರ್ವಾಹಣ ಮುಂಗಡ ಪತ್ರವನ್ನು ಎಲ್ಲಾ ಇಲಾಖೆಯವರು ಕೊಡಲೇ ಬೇಕು. ಒಂದು ವೇಳೆ ಅದನ್ನು ಕೊಡದಿದ್ದರೆ ಅದು ತಪ್ಪು. ಅದರ ಸಂಪೂರ್ಣ ಹೊಣೆಯನ್ನು ಸರ್ಕಾರ ವಹಿಸಿಕೊಳ್ಳುತ್ತದೆ. ತಾವು ಈವತ್ತು ಮನಸ್ಸು ಮಾಡಿದರೆ. ಉದಾಹರಣೆಗೆ ಬಾಯಿ ಇಲ್ಲದ ಹಸುಗಳ ಬಗ್ಗೆ ನಾನು ಮಾತನಾಡುತ್ತೇನೆಂದು ಮಾನ್ಯ ಕೃಷ್ಣಪ್ಪನವರು ಹೇಳಿದರು. ಅವರು ಈ ಹಿಂದೆ ಮಂತ್ರಿಗಳೇ ಆಗಿದ್ದರು. ಆದ್ದರಿಂದ ಅದರ ಆಡಳಿತದ ವಿಚಾರಗಳೆಲ್ಲಾ ಗೊತ್ತಿದೆ. ಅವರು ಮನಸ್ಸು ಮಾಡುವುದಾಗಿದ್ದರೆ ಮಾತನಾಡಬಹುದು. ಅಥವಾ ತಾವೆಲ್ಲರೂ ಒಪ್ಪುವುದಾದರೆ ಮಾತನಾಡಬಹುದು. ಇಲ್ಲ ಅದು ಬಂದ ಮೇಲೆಯೇ ಮಾತನಾಡುತ್ತೇನೆಂದರೆ ಬೇರೆ ಕಾರ್ಯಕಲಾಪಗಳನ್ನು ತಾವು ತೆಗೆದುಕೊಳ್ಳಬಹುದು ನಾವು ನಾಳೆ ಇಲ್ಲವೇ ನಾಡಿದ್ದರ ಒಳಗಾಗಿ ಆ ನಿರ್ವಾಹಣ ಪತ್ರವನ್ನು ಕಳುಹಿಸಿಕೊಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ತಾವೇ ನಿರ್ವಾಹಣ ಪತ್ರ ಯಾವ್ಯಾವುದು ಬಂದಿದೆ ಎಂದು ಓದಿದಿರಿ ಅಂದರೆ ಸರ್ಕಾರ ಶಾಸಕಾಂಗಕ್ಕೆ ಕೊಟ್ಟಿದೆ, ಶಾಸಕಾಂಗದಿಂದ ವಿತರಣೆಯಾಗಿಲ್ಲವೆಂಬ ಭಾವನೆಯನ್ನು ಮಾನ್ಯ ಅಧ್ಯಕ್ಷರೇ ಕೊಟ್ಟಬಿಟ್ಟರು. ಇಂತಿಂಥದ್ದು ಬಂದಿದೆ ಎಂದು ಮಾನ್ಯ ಅಧ್ಯಕ್ಷರೇ ಹೇಳಿದರು. ಅಂದರೆ ಸರ್ಕಾರದಿಂದ ಶಾಸಕಾಂಗಕ್ಕೆ ಕೊಟ್ಟಿದೆ. ಶಾಸಕಾಂಗದಿಂದ ವಿತರಣೆಯಾದಂತೆ ಕಾಣಲಿಲ್ಲ. ಅಧ್ಯಕ್ಷರು ಹೇಳಿದ್ದು, ಅಧ್ಯಕ್ಷರಿಗೆ ಬಂದಂತಾಯಿತು. ಲೆಜಿಸ್‌ಲೇಚರ್‌ಗೆ ಬಂದಿದೆ ಅಂತಾಯಿತು.

ಶ್ರೀ ಎಸ್.ಎಸ್.ಪಾಟೀಲ್: ಶಿಕ್ಷಣ ಇಲಾಖೆಯದ್ದು ಮಾತ್ರ ಬಂದಿದೆ. ನಿಮ್ಮ ಇಲಾಖೆಯಿಂದ ಕೌನ್ಸಿಲ್‌ನದನ್ನು ನಮಗೆ ಕಳುಹಿಸಿದ್ದಾರೆ ವಿಧಾನಸಭೆಯದು ಬಂದಿಲ್ಲ. ಕೌನ್ಸಿಲ್‌ನ questions ಎಲ್ಲಾ ನಮಗೆ ಬಂದಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಿಯಮಾವಳಿ 69 ರ ಅಡಿಯಲ್ಲಿ ಯಾವುದಾದರೊಂದನ್ನು ತೆಗೆದುಕೊಂಡುಬಿಡಿ. ಇದನ್ನು ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರೇ, ತಾವು ಮಾತನಾಡಿ. ತಾವು ಕೃಷಿ ಸಚಿವರಾಗಿದ್ದವರು. ಅವರಿಗೆ ಎಲ್ಲಾ ಅನುಭವವಿದೆ. ಅವರು ಆರಂಭ ಮಾಡಲಿ. ಈಗಾಗಲೇ ನಾಲ್ಕು ಗಂಟೆಯಾಯಿತು. ಐದು ಗಂಟೆಗೆ ಮುಗಿಸೋಣ. ಅವರು ಆರಂಭ ಮಾಡಲಿ ಬಿಡಿ.

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಎಸ್.ಎಸ್. ಪಾಟೀಲರು ಅವರ ಅನುಭವದ ಆಧಾರದ ಮೇಲೆ ಮಾತನಾಡಿದ್ದಾರೆ. ಇವೆಲ್ಲದರ ಬಗ್ಗೆ ರಿಪೋರ್ಟ್ ಬೇಕು. ಅದರ

ಆಧಾರದ ಮೇಲೆ ಚರ್ಚೆಯಲ್ಲಿ ಭಾಗವಹಿಸಿದರೆ ಲಾಭವಾಗುತ್ತದೆ. ಅದಕ್ಕೆ ಅವರು ನಾಳೆ ಒದಗಿಸಿ ಎಂದು ಹೇಳಿದ್ದಾರೆ. ಈಗ ಮಾನ್ಯ ಶ್ರೀನಿವಾಸಗೌಡರು ಪ್ರಾರಂಭ ಮಾಡುತ್ತಾರೆ.

ಶ್ರೀ ಎಂ. ಪಿ. ಪ್ರಕಾಶ್: ಈಗಾಗಲೇ ಮಾನ್ಯ ಅಧ್ಯಕ್ಷರು ತಾವೂ ಕೂಡ ಮುಖ್ಯ ಕಾರ್ಯದರ್ಶಿಯವರನ್ನು ಕರೆದು ಐದಾರು ದಿವಸಗಳ ಹಿಂದೆ ಸಭೆ ಮಾಡಿದ್ದೀರಿ. ಮುಖ್ಯ ಕಾರ್ಯದರ್ಶಿಯವರೂ ಕೂಡ ಎಲ್ಲಾ ಇಲಾಖೆಯ ಕಾರ್ಯದರ್ಶಿಯವರಿಗೆ ಈ ವಿಚಾರವನ್ನು ತಿಳಿಸಿದ್ದಾರೆ. ಆ ಪರ್‌ಫಾರ್ಮೆನ್ಸ್ ಬಜೆಟ್‌ನ ನಿರ್ವಹಣಾ ಬಜೆಟ್‌ನ ಪ್ರತಿಗಳು ಇಲ್ಲದಿದ್ದರೆ ಕಷ್ಟವಾಗುತ್ತದೆ. ಅದರ ಸಂಪೂರ್ಣ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ನಾವು ವಹಿಸಿಕೊಳ್ಳುತ್ತೇವೆ. ಒಂದೆರಡು ದಿವಸದೊಳಗೆ ಆ ನಿರ್ವಹಣಾ ಬಜೆಟ್‌ನ್ನು ಕೊಡುತ್ತೇವೆ. ಯಾರ್‍ಯಾರು ಅದರಲ್ಲಿ ಪಾಲ್ಗೊಳ್ಳಲು ಇಷ್ಟಪಡುತ್ತಾರೆ ಪಾಲ್ಗೊಳ್ಳಲಿ. ಈಗ ಶ್ರೀನಿವಾಸಗೌಡರಿದ್ದಾರೆ.

ಅಧ್ಯಕ್ಷರು: ಮಾನ್ಯ ಪ್ರಕಾಶ್‌ರವರಲ್ಲಿ ಗೌರವಪೂರ್ವಕವಾಗಿ ನಾನು ಹೇಳುವುದೇನೆಂದರೆ, ಕಳೆದ ವಾರವೇ ಇದು ಆರಂಭವಾಗಬೇಕಿತ್ತು. ಅದಕ್ಕಿಂತ ಹಿಂದೆಯೇ ನಾನು ಮುಖ್ಯ ಕಾರ್ಯದರ್ಶಿಯವರನ್ನು ಕರೆಸಿ ಹೇಳಿದ್ದೇನೆ. ಅವರು ಏನು ಮಾಡಿದ್ದಾರೋ ಗೊತ್ತಿಲ್ಲ. ಆರೇಳು ದಿವಸಗಳ ಹಿಂದೆಯೇ ಬರಬೇಕಾಗಿದ್ದ ಪರ್‌ಫಾರ್ಮೆನ್ಸ್ ಬಜೆಟ್‌ನ್ನು ಸರ್ಕಾರ ಇನ್ನೂ ಕೊಟ್ಟಿಲ್ಲವೆಂದರೆ ಇಲಾಖೆಗಳು ನಿದ್ರೆ ಮಾಡುತ್ತಿದ್ದಾವೆ ಎಂದೇ ಅರ್ಥ. ಆದ್ದರಿಂದ ನಾಳೆ ಅದನ್ನು ಕೊಡಲು ಆಗುವುದಿಲ್ಲ. ಏಕೆಂದರೆ ನಿದ್ರೆಯಲ್ಲಿರುವ ಈ ಕುಂಭಕರ್ಣರನ್ನು ಏದ್ದೇಳಿಸಬೇಕಲ್ಲಾ? ನಾಳೆ ಎಲ್ಲಿ ಬರುತ್ತದೆ? ಅದೇ ರೀತಿ ಹೋದರೆ ಇನ್ನು ನಾಲ್ಕೈದು ದಿವಸ ಬರುವುದಿಲ್ಲ. ಹೀಗಾದರೆ ಸದನವನ್ನೇಕೆ ಕರೆಯಬೇಕು? ನಿಮ್ಮ ಇಲಾಖೆಯ ಅಧಿಕಾರಿಗಳು ಗುತ್ತಿಗೆ ತೆಗೆದುಕೊಂಡಿದ್ದಾರೆಯೇ? ಅವರು ಏಕಿದ್ದಾರೆ? ಇಡೀ ಸದನ ಪರ್‌ಫಾರ್ಮೆನ್ಸ್ ಬಜೆಟ್‌ನ್ನು ಕೊಟ್ಟಿಲ್ಲವೆಂದು ಸದನ ನಡೆಯುವುದಿಲ್ಲವೆಂದರೆ ಏನಿದರ ಅರ್ಥ? ಇನ್ನು ಮುಂದೆ ಯಾವುದೇ ಇರಲಿ ಸದನ ಆರಭವಾಗುವ ನಾಲ್ಕು ದಿವಸ ಮೊದಲು ನಮ್ಮ ಕಛೇರಿಗೆ ತಲುಪಿಸಬೇಕು. ಆ ರೀತಿ ಮಾಡಿ ಯಾವುದನ್ನೂ ಮಾಡುವುದಿಲ್ಲ. ಏನೂ ಇಲ್ಲ. ಇಲಾಖೆಯವರು ಮಲಗಿಬಿಟ್ಟಿದ್ದಾರೆ. ಈ ರೀತಿ ಮಾಡಿದರೆ ಸದನಕ್ಕೆ ಗೌರವ ಬರುತ್ತದೆಯೇ?

ಶ್ರೀ ವಾಟಾಳ್‌ನಾಗರಾಜ್: ಈ ಸದನ ಪ್ರಾರಂಭವಾಗಿ ಏಳು ದಿವಸವಾಯಿತು. ಈ ವ್ಯವಸ್ಥೆ ಹದಗೆಟ್ಟು ಹೋಗಿದೆ. ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ಹಿಡಿತ ಇಲ್ಲ. ಸರ್ಕಾರವೇ ಬೇರೆ, ಅಧಿಕಾರಿಗಳೇ ಬೇರೆಯಾಗಿದ್ದಾರೆ.

ಅಧ್ಯಕ್ಷರು: ಪರ್‌ಫಾರ್ಮೆನ್ಸ್ ಬಜೆಟ್ ಕೊಡದೆ ಯಾವುದೇ ರೀತಿಯಲ್ಲಿ ಸದನ ನಡೆಸಲು ಆಗುವುದಿಲ್ಲ. ಏನೋ ಒಂದು ದಿವಸ ಅಂದರೆ ಪರವಾಗಿಲ್ಲ. ಆರೇಳು ದಿವಸಗಳಿಂದ ಬರುವುದಿಲ್ಲವೆಂದರೆ ಹೇಗೆ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಯಾವ ಇಲಾಖೆಗಳ ಮೇಲೂ ಸಹ ಸರ್ಕಾರಕ್ಕೆ ಹಿಡಿತವಿಲ್ಲ. ಯಾವ ಅಧಿಕಾರಿಗಳ ಮೇಲೂ ಸಹ ಹಿಡಿತ ಇಲ್ಲ

ಅಧ್ಯಕ್ಷರು: ಆಯಿತು ಈಗ ಮಾನ್ಯ ಶ್ರೀನಿವಾಸಗೌಡರು ಮಾತನಾಡುತ್ತಾರೆ. ಮಾತನಾಡಲಿ.